# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1206
ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 29.12.2022
ಉತ್ತರಿಸಬೇಕಾದ ಸಚಿವರು : ಜಲ ಸಂಪನ್ಮೂಲ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಜಲಸಂಪನ್ಮೂಲ ಇಲಾಖೆ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳು ಇವೆ; ಯಾವ ಯಾವ ಗ್ರಾಮಗಳಲ್ಲಿ ಕೆರೆಗಳಿವೆ; ಅವುಗಳ ವಿಸ್ತೀರ್ಣ ಎಷ್ಟು; ಎಷ್ಟು ಕೆರೆಗಳ ಎಷ್ಟು ವಿಸ್ತೀರ್ಣ ಒತ್ತುವರಿಯಾಗಿದೆ: ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ವಿವರ ನೀಡುವುದು) | ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಹರಿಹರ ತಾಲ್ಲೂಕು ಕೆರೆಗಳ ಅಭಿವೃದ್ಧಿಗೆ ಕಳೆದ 4 ವರ್ಷಗಳಿಂದ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು: (ಸಂಪೂರ್ಣ ವಿವರ ನೀಡುವುದು). | ಹರಿಹರ ತಾಲ್ಲೂಕಿನ ಕೆರೆಗಳ ಅಭಿವೃದ್ಧಿಗೆ ಕಳೆದ ನಾಲ್ಕು ವರ್ಷಗಳಿಂದ ಅನುದಾನ ಒದಗಿಸಿರುವುದಿಲ್ಲ. |
| ಇ) | ಹರಿಹರ ತಾಲ್ಲೂಕಿಗೆ ಜಲಸಂಪನ್ಮೂಲ ಇಲಾಖೆ ವ್ಯಾಪ್ತಿಯ ನಾಲಾ/ ಕಾಲುವೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಯಾವ ಯಾವ ಭಾಗದಲ್ಲಿ/ಗ್ರಾಮಗಳ ವ್ಯಾಪ್ತಿಯಲ್ಲಿ ದುಸ್ಥಿತಿಯಲ್ಲಿವೆ: ದುರಸ್ಥಿಗೆ ಎಷ್ಟು ಅನುದಾನ | ಭದ್ರಾ ಯೋಜನೆಯ ಹರಿಹರ ಶಾಖಾ ಕಾಲುವೆಯಡಿಯಲ್ಲಿ 12ನೇ ಎ & ಬಿ ಮೈನರ್‌ನ ಆಕ್ವಡಕ್ಟ್ ದುಸ್ಥಿತಿಯಲ್ಲಿದ್ದು, ಸದರಿ ಆಕ್ವಡಕ್ಟ್ ನಿರ್ಮಾಣಕ್ಕೆ ರೂ. 30.00 ಲಕ್ಷಗಳ ಅನುದಾನ ಟಿಎಸ್‌ಪಿ ಯೋಜನೆಯಡಿಯಲ್ಲಿ ಬಿಡುಗಡೆಯಾಗಿದ್ದು, ಶೀಘ್ರವಾಗಿ ಕಾಮಗಾರಿ ಕೈಗೊಳ್ಳಲು ಕ್ರಮವಹಿಸಲಾಗುವುದು.<br>ಬೇವಿನಹಳ್ಳಿ ಬಲದಂಡೆ ಕಾಲುವೆಯಡಿಯಲ್ಲಿ ಚೈ.0.45 ಕಿ.ಮೀ.ನಲ್ಲಿನ ಪೈಪ್ ಕಲ್ವರ್ಟ್ ಪ್ರಸಕ್ತ ಸಾಲಿನ ಅಧಿಕ ಮಳೆಯಿಂದಾಗಿ ಶಿಥಿಲಗೊಂಡಿದ್ದು, ಸಕ್ಷಮ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಬಿಡುಗಡೆ ಮಾಡಲಾಗಿದೆ: (ಸಂಪೂರ್ಣ ವಿವರ ನೀಡುವುದು) | ಪ್ರಾಧಿಕಾರದ ಅನುಮೋದನೆ ಪಡೆದು, ಕಾಮಗಾರಿ ನಿರ್ವಹಿಸಲು ಕ್ರಮ ಜರುಗಿಸಲಾಗುವುದು. |
| ಈ) | ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ರೈತರ ಬಹು ಬೇಡಿಕೆ ಇರುವ ಬೈರನಪಾದ ಏತ ನೀರಾವರಿ ಯೋಜನೆಯ ಡಿ.ಪಿಆರ್ (ವಿಸ್ತೃತ ಯೋಜನಾ ವರದಿ) ತಯಾರಿಸಲಾಗಿದೆಯೇ: ಆದರ ವೆಚ್ಚ ಎಷ್ಟು ಬೈರನಪಾದ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ. ಅನುಷ್ಠಾನಗೊಂಡಲ್ಲಿ ಯಾವ ಯಾವ ಗ್ರಾಮಗಳಿಗೆ ಅನುಕೂಲವಾಗಿದೆ:? :(ಸಂಪೂರ್ಣ ವಿವರ ನೀಡುವುದು) | ಬೈರನಪಾದ ಏತ ನೀರಾವರಿ ಯೋಜನೆಯ ರೂ.58.13 ಕೋಟಿ (2018-19 ನೇ ಸಾಲಿನ ದರಪಟ್ಟಿ ದರಗಳನ್ವಯ) ಮೊತ್ತದ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದೆ.<br>ಸದರಿ ಯೋಜನೆಯಿಂದ ಹರಿಹರ ತಾಲ್ಲೂಕಿನ ಭದ್ರಾ ಕಾಲುವೆಯಿಂದ ನೀರಾವರಿ ವಂಚಿತವಾಗಿರುವ ಹರಿಹರ ತಾಲ್ಲೂಕಿನ ಗ್ರಾಮಗಳಾದ ಜಿಗಳಿ, ಯಲವಟ್ಟಿ, ಜಿ.ಬೇವಿನಹಳ್ಳಿ, ಹಳ್ಳಿಹಾಳು, ಕಂಬತ್ತನಹಳ್ಳಿ, ಕೆ.ಎನ್.ಹಳ್ಳಿ, ಕೊಕ್ಕನೂರು, ಹಿಂಡಸಘಟ್ಟ, ಗೊವಿನಹಾಳು, ನಂದಿಗುಡಿ, ವಾಸನ, ಸಿರಿಗೆರಿ, ಪಾಳ್ಯ, ಎಳೆಹೊಳೆ, ಮಳಲಹಳ್ಳಿ, ಲಕ್ಕಶೆಟ್ಟಿಹಳ್ಳಿ, ದೂಳೆಹೊಳೆ, ಕಮಲಾಪುರ, ಭಾನುವಳ್ಳಿ, ನಂದಿಗಾವಿ, ಹೊಸಹಳ್ಳಿ, ಬಿಳಸನೂರು, ರಾಜನಹಳ್ಳಿ ಮತ್ತು ತಿಮ್ಲಾಪುರ ಗ್ರಾಮಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಯೋಜಿಸಲಾಗಿದೆ. |
| ಉ) | ಬೈರನಪಾದ ಏತ ನೀರಾವರಿ ಯೋಜನೆಯನ್ನು ಸರ್ಕಾರ ಅನುಷ್ಠಾನಗೊಳಿಸುವುದೇ ಅಥವಾ ಇಲ್ಲವೇ? :(ಸಂಪೂರ್ಣ ವಿವರ ನೀಡುವುದು) | ಬೈರನಪಾದ ಏತ ನೀರಾವರಿ ಯೋಜನೆಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತಂತೆ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ನಿರೀಕ್ಷಿಸಲಾಗಿದ್ದು, ತದನಂತರ ಯೋಜನೆಯ ಅನುಷ್ಠಾನ ಕುರಿತಂತೆ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು. |

ಜಸಂಇ 218 ಎಂಎಲ್ಎ 2022

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

# ಅನುಬಂಧ

## ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನಲ್ಲಿ ಕರ್ನಾಟಕ ನೀರಾವರಿ ನಿಗಮದ ಅಧೀನದಲ್ಲಿರುವ ಕೆರೆಗಳ ವಿವರ

| ಕ್ರ. ಸಂ. | ಗ್ರಾಮ | ಕೆರೆಗಳ ಹೆಸರು | ಒಟ್ಟು ವಿಸ್ತೀರ್ಣ | | ಕೆರೆಗಳ ಒತ್ತುವರಿ | | ಷರಾ |
|---|---|---|---|---|---|---|---|
| | | | ಎಕರೆ | ಗುಂಟೆ | ಎಕರೆ | ಗುಂಟೆ | |
| 1 | ಕಮಲಾಪುರ | ಕಮಲಾಪುರ | 20 | 8 | 0 | 02 | |
| 2 | ಯಲವಟ್ಟಿ | ಯಲವಟ್ಟಿ | 63 | 25.50 | 0 | 0 | |
| 3 | ಸಿರಿಗೆರಿ | ಸಿರಿಗೆರಿ | 62 | 25.10 | 0 | 0 | |
| 4 | ಬನ್ನಿಕೋಡು | ಚಂದಪ್ಪನ ಕೆರೆ | 61 | 22 | 3 | 25 | 15 ಎಕರೆ 33 ಗುಂಟೆ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, 3 ಎಕರೆ 25 ಗುಂಟೆ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |
| 5 | ಕೊಂಡಜ್ಜಿ | ಕೊಂಡಜ್ಜಿ ಕೆರೆ | 227 | 12 | 0 | 0 | |